



ನಮ್ಮಲ್ಲಿ 567 ತಳಿ ಭತ್ತ ಇವೆ, 60 ದಿನಗಳಿಗೆ ಕಟಾವಿಗೆ ಬರುವ ಭತ್ತ ಇದೆ, 180 ದಿನಕ್ಕೆ ಕಟಾವು ಮಾಡೋ ಭತ್ತವೂ ಇದೆ, ಹೆಚ್ಚು ನೀರಿನಲ್ಲಿ ಬೆಳೆಯೋ ಭತ್ತವನ್ನೂ ಬೆಳೀತೀವಿ, ಕಡಿಮೆ ನೀರಿನಲ್ಲಿ ಬೆಳೆಯುವ ಭತ್ತವನ್ನೂ ನಮ್ಮಲ್ಲಿ ಕೃಷಿ ಮಾಡ್ತೀವಿ, ಎಕರೆಗೆ 5 ಕ್ವಿಂಟಾಲ್ ಕೊಡೋ ಭತ್ತವೂ ಇದೆ, 25 ಕ್ವಿಂಟಾಲ್ ಬರೋ ಭತ್ತವೂ ಇದೆ...!

-ಸಯ್ಯದ್ ಘನಿ ಖಾನ್

# ಭತ್ತದ 'ಗಣಿ' ಖಾನ್!

ಗುರುಪ್ರಸಾದ್ ತುಂಬಸೋಗೆ
ಮಾಗನೂರು ಶಿವಕುಮಾರ್

## ಇವರ ಹತ್ತಿರ 567 ಭತ್ತದ ತಳಿಗಳಿವೆ!



ನಮ್ಮ ಪ್ರಾದೇಶಿಕ ಪರಿಸರಕ್ಕೆ, ನೀರು ನೆಲಕ್ಕೆ ಹೊಂದುವ ವಿಶಿಷ್ಟ ಸಸ್ಯ ತಳಿಗಳು ಈಗ ನಾಶವಾಗುತ್ತಿವೆ. ಭತ್ತದ ತಳಿಗಳೆಂದರೆ ನೆನಪಾಗುವುದು ಬೆರಳೆಣಿಕೆಯಷ್ಟು. ಆದರೆ 567 ಭತ್ತದ ತಳಿಗಳನ್ನು ಜತನದಿಂದ ಕಾಯ್ದಿಟ್ಟುಕೊಳ್ಳುತ್ತಿರುವ ಅಪರೂಪದ ಉತ್ಸಾಹಿ ಕೃಷಿಕರು ನಮ್ಮ ನಡುವಿನ ಹೆಮ್ಮೆ, ಭರವಸೆ. ಭತ್ತದ ಕಣಜದ ಘನಿ ಖಾನ್‌ರ ಪರಿಚಯವಿಲ್ಲಿದೆ.

ಇದ್ಯಾವುದೋ ಭತ್ತದ ಮ್ಯೂಸಿಯಂನಲ್ಲಿ ನಿಂತು ಹೇಳುತ್ತಿದ್ದಾರೆ ಎಂದು ಖಂಡಿತ ಭಾವಿಸಬೇಡಿ. ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕು ಕಿರುಗಾವಲಿನ ರೈತ ಸೈಯ್ಯದ್ ಮಹಮ್ಮದ್ ಘನಿ ಖಾನ್‌ರ 'ಭತ್ತದ ಕಣಜ'ನೋಡಿದರೆ ಎಂಥವರಿಗೂ ವಿಸ್ಮಯವಾದೀತು.

ಸೈಯದ್ ಮಹಮದ್ ಹಾಗೂ ಹಲೀಮ ಬೇಗಂ ದಂಪತಿಗಳ ನಾಲ್ವರು ಪುತ್ರರಲ್ಲಿ ಹಿರಿಯ ಪುತ್ರರಾದ ಸೈಯದ್ ಘನಿ ಖಾನ್ ತಮ್ಮ 20 ಎಕರೆ ಭೂಮಿಯಲ್ಲಿ ವಿವಿಧ ಬೆಳೆಗಳ ಸಂರಕ್ಷಣೆಯಲ್ಲಿ ತೊಡಗಿದ್ದಾರೆ. ಟಿಪ್ಪು ಸುಲ್ತಾನ್ ತನ್ನ ಬಳಿ ಸೇವೆ ಸಲ್ಲಿಸುತ್ತಿದ್ದ ಸೈನಿಕರಿಗೆ ಜಮೀನನನ್ನು ಉಂಬಳಿಯಾಗಿ ನೀಡಿ ಅದರಲ್ಲಿ ಮಾವನ್ನು ಬೆಳೆಯಲು ಪ್ರೋತ್ಸಾಹಿಸಿದ್ದ. ಟಿಪ್ಪೂ ಬಳಿ ಸೈನಿಕರಾಗಿದ್ದ ಘನಿ ಖಾನ್ ಅವರಿಗೂ 20 ಎಕರೆ ಜಮೀನು ದೊರೆಯಿತು. ನಂತರ ಕನ್ನಂಬಾಡಿಯ ನೀರು ಇವರ ಜಮೀನಿಗೆ ಬಂತು. ಕ್ರಮೇಣ ಮಾವಿನ ತೋಪಿನ ನಡುವೆ ಭತ್ತವನ್ನು ಬಿತ್ತಿದರು. ತಾತನ ಹೆಸರನ್ನೇ ಹೊತ್ತ 36 ವರ್ಷದ ಘನಿ ಖಾನ್ ಇಂದು ಇಲ್ಲಿ ಜೀವಂತ ಭತ್ತದ ಮ್ಯೂಸಿಯಂ ಮಾಡಿದ್ದಾರೆ.

ವಿದ್ಯಾರ್ಥಿ ದೆಸೆಯಿಂದಲೇ ಕೃಷಿಯ ಮೇಲೆ ಆಸಕ್ತಿ ಇದ್ದ ಘನಿ ಬಾಲ್ಯದಲ್ಲೆ ಮನೆ ಎದುರು ಕೈತೋಟ ನಿರ್ಮಿಸಿದ್ದರು. 1996 ರಲ್ಲಿ ಮೈಸೂರು ಮಹಾರಾಜ ಕಾಲೇಜಿನಲ್ಲಿ ಬಿ.ಎ. ಪದವಿ ಮುಗಿಸಿದ ಮೇಲೆ ಕೆಲಸಕ್ಕಾಗಿ ನಗರ ಪ್ರದೇಶ ಸೇರಬಹುದಿತ್ತು. ಜೊತೆಗೆ ವಿದೇಶಕ್ಕೆ ಹೋಗುವ ಅವಕಾಶವೂ ಸಿಕ್ಕಿತ್ತು. ಆದರೆ ಅದೆಲ್ಲವನ್ನೂ ನಿರಾಕರಿಸಿ ಇಲ್ಲೇ ಇದ್ದು ಏನಾದರೂ ಸಾಧಿಸಬೇಕು ಎಂಬ ಆಸೆಯಿಂದ ಕೃಷಿಯತ್ತ ಮುಖಮಾಡಿದರು.

ಕೃಷಿ ಕ್ಷೇತ್ರದಲ್ಲಿ ಏನಾದರೂ ಸಾಧನೆ ಮಾಡಬೇಕು ಎಂಬ ಛಲದಿಂದ ಘನಿ ವ್ಯವಸಾಯ ಪ್ರಾರಂಭಿಸಿದರು. ಮೊದಲು ಸಾಮಾನ್ಯವಾಗಿ ಎಲ್ಲ ರೈತರಂತೆ ರಾಸಾಯನಿಕ ಕೃಷಿ ಮಾಡುತ್ತಿದ್ದ ಘನಿ ನಂತರ ದಿನಗಳಲ್ಲಿ ಸಾವಯವ ಕೃಷಿಗೆ ಮನಸೋತರು. ಈ ಹಂತದಲ್ಲಿ ಅವರಿಗೆ ಆಕಸ್ಮಿಕವಾಗಿ 'ರತ್ನಚೂಡಿ' ಎಂಬ ಭತ್ತದ ಬೀಜ ದೊರೆಯಿತು. ಅದೂ ಕೇವಲ 40 ಕಾಳು! ಘನಿ ಅವರು 40 ಕಾಳನ್ನೇ ಬಿತ್ತಿ. 2 ಕೆಜಿ ಭತ್ತ ಬೆಳೆದರು. ನಂತರ ಅದು 2 ಮೂಟೆ ಆಯಿತು. ರತ್ನಚೂಡಿ ಭತ್ತವನ್ನು ನೋಡಿದ ಊರಿನವರು ಇದನ್ನೇ ಬೆಳೆಯಲು ಪ್ರಾರಂಭಿಸಿದರು. ನಂತರ 'ಸಹಜ ಸಮೃದ್ಧ ಬಳಗ' ಎನ್ನುವ ಸಂಸ್ಥೆಯ ಸಂಪರ್ಕಕ್ಕೆ ಬಂದ ಮೇಲೆಯೇ ಇವರ ಕೃಷಿ ಜೀವನಕ್ಕೆ ಮಹತ್ತರ ತಿರುವು ದೊರೆಯಿತು. ಆ ಸಂಸ್ಥೆಯಿಂದ ಕೆಲವು ತಳಿಗಳನ್ನು ಪಡೆದುಕೊಂಡು ಅಭಿವೃದ್ಧಿಪಡಿಸಲು ಮುಂದಾದರು. ಮೊದ ಮೊದಲು 9, ನಂತರ 20 ರಿಂದ 25, ತದನಂತರ 70 ತಳಿಗಳಿಗೆ ಸಂಖ್ಯೆ ಹೆಚ್ಚುತ್ತಾ ಹೋಯಿತು. ಈಗ ಘನಿಯ ಕೈಯಲ್ಲಿ 567 ಭತ್ತದ ತಳಿಗಳಿವೆ!

ಕರ್ನಾಟಕ, ಕೇರಳ, ತಮಿಳುನಾಡು, ಮಹಾರಾಷ್ಟ್ರ, ಒರಿಸ್ಸಾ, ಬಿಹಾರ, ಪಶ್ಚಿಮ ಬಂಗಾಳ, ಗುಜರಾತ್, ಅಸ್ಸಾಮ್, ಉತ್ತರ ಪ್ರದೇಶದ ದೇಶಿಯ ತಳಿಗಳಷ್ಟೆ ಅಲ್ಲದೆ ಪಾಕಿಸ್ತಾನದ ಬಾಸ್ಮತಿ, ಜಾಸ್ಮಿನ್, ಥೈಲ್ಯಾಂಡ್‌ನ ಬ್ಲಾಕ್‌ಸ್ಟಿಕ್, ಬರ್ಮಾದ ಕಪ್ಪು ಅಕ್ಕಿಯನ್ನು ಬೆಳೆದು ವಿದೇಶಿ ತಳಿಗಳನ್ನು ಸಂರಕ್ಷಿಸಿದ್ದಾರೆ. ತಮಗಿರುವ 20 ಎಕರೆ ಜಮೀನಿನಲ್ಲಿ 1 ಎಕರೆಯನ್ನು ಈ ತಳಿಗಳನ್ನು ಬೆಳೆಯಲು ಬಳಸುತ್ತಿದ್ದು, ಹಲವು ಭತ್ತದ ತಳಿಗಳು ನಾಶವಾಗುವ ಭೀತಿಯಲ್ಲಿರುವುದರಿಂದ ಅವುಗಳನ್ನು ಉಳಿಸಿ ಮುಂದಿನ ಪೀಳಿಗೆಗೆ ಅನುಕೂಲವಾಗಲೆಂದು ಈ ಮಹತ್ತರ ಕೆಲಸಕ್ಕೆ ಮುಂದಾಗಿದ್ದಾರೆ.





ಜೊತೆಗೆ ಮುಂದಿನ ದಿನಗಳಲ್ಲಿ ನೀರಿನ ಕೊರತೆ ಕಂಡು ಬರುವ ಸಾಧ್ಯತೆ ಇರುವುದರಿಂದ ಕಡಿಮೆ ನೀರು ಬಳಸಿ ಬೆಳೆಯುವ ಭತ್ತದ ತಳಿಯನ್ನು ಅಭಿವೃದ್ಧಿಪಡಿಸಿದ್ದಾರೆ.

ನೀರಾವರಿಯಲ್ಲಿ ಬೆಳೆಯುವ ಪರಿಮಳ ಬೀರುವ ಜೀರಿಗೆ ಸಣ್ಣ, ಗಂಧಸಾಲೆ, ಕಾಗಿಸಾಲೆ, ರಸಕದಂ, ಘಂಗಡಲೆ, ಬಾಸುಮತಿ, ಸಣ್ಣಕ್ಕಿ ಮುಂತಾದ ಅಕ್ಕಿಗಳಿಂದ ತಂಬಿಟ್ಟು, ಕಜ್ಜಾಯ, ಬಿರಿಯಾನಿ ಮಾಡಲು ರುಚಿಯಾಗಿರುತ್ತದೆ. ವೈವಿಧ್ಯತೆಗೆ ಹೆಸರಾದ ಕರ್ನಾಟಕ ತಳಿಗಳಾದ ಯಳಂದೂರಿನ 'ರತ್ನಚೂಡಿ', ಹಾಸನದ 'ರಾಜಮುಡಿ', ಮಲೆನಾಡಿನ ಗಂಧಸಾಲೆ, ಸೊರಬದ 'ಸಿದ್ದಸಾಲೆ', ತುಮಕೂರಿನ 'ಹಾಲುಬ್ಬಲು', ಮಂಡ್ಯದ 'ಬಂಗಾರ ಸಣ್ಣ' ಅಷ್ಟೇ ಅಲ್ಲದೆ ಔಷಧಿಯ ತಳಿಗಳಾದ ಮೂಲವ್ಯಾಧಿಗೆ ಮದ್ದಾಗುವ 'ಕಯಮೆ', ಮಕ್ಕಳ ವಾಂತಿ ಭೇದಿಗೆ ಬರುವ 'ಸಣ್ಣಕ್ಕಿ', ಬಾಣಂತಿಯರಿಗೆ ಟಾನಿಕ್ ಎನಿಸಿದ 'ಕರಿಕಳವೆ', ರಕ್ತ ಹೀನತೆ ನಿವಾರಿಸುವ 'ಕರಿಗಜವಲಿ', ಕರಿಭತ್ತ, ಕೆಮ್ಮು ಎದೆ ನೋವಿಗೆ ಸಂಜೀವಿನಿ ಎನಿಸಿದ 'ದೊಡ್ಡ ಭೈರನೆಲ್ಲು' ಮುಂತಾದ ಜನರ ಮನಗೆದ್ದ ತಳಿಗಳು ಇಲ್ಲಿವೆ.

### ಭತ್ತ ಉಳಿಸಿ ಆಂದೋಲನ

ಭತ್ತ ಉಳಿಸಿ ಆಂದೋಲನದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಭಾರತದಾದ್ಯಂತ ದೇಶಿ ಭತ್ತವನ್ನು ಉಳಿಸಲು ಪಂಜಾಬ್, ಬಿಹಾರ, ಒರಿಸ್ಸಾ ರಾಜ್ಯಗಳಲ್ಲಿ ಸಂಚರಿಸಿ ದೇಶಿ ಭತ್ತದ ತಳಿಗಳ ಬಗ್ಗೆ ರೈತರಿಗೆ ಅರಿವು ಮೂಡಿಸುವುದಲ್ಲದೆ ಅಲ್ಲಿನ ತಳಿಗಳನ್ನು ತೆಗೆದುಕೊಂಡು ಬಂದು ಇಲ್ಲಿ ಸಂರಕ್ಷಿಸುತ್ತಾರೆ. ಅಪರೂಪದ ತಳಿಗಳನ್ನು ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ, ಬೆಂಗಳೂರಿನಲ್ಲೂ ಸಂರಕ್ಷಿಸಲಾಗುತ್ತಿದೆ. ಸೈಯದ್ ಘನಿ ಖಾನ್ ಅವರು ಬರೀ ಭತ್ತದ ಬೆಳೆಯಲ್ಲಷ್ಟೆ ಅಲ್ಲದೆ ಕೊಚ್ಚಿನ್ ಹಾಗೂ ಕ್ಯಾಲಿಕಟ್ ನಲ್ಲಿ ನಡೆದ ಅಂತರ್ ರಾಜ್ಯ ಮಾವು ಮೇಳದಲ್ಲಿ ಭಾಗವಹಿಸಿ ದೇಶಿ ತಳಿಗಳ ಮಾವು ಪ್ರದರ್ಶನ ನೀಡಿದ್ದಾರೆ. ಅನೇಕ ರಾಜ್ಯ ಹಾಗೂ ಅಂತಾರಾಜ್ಯ ಕೃಷಿ ಮೇಳಗಳಲ್ಲಿ ಭಾಗವಹಿಸಿದ್ದಾರೆ.

### ಪ್ರಶಸ್ತಿಗಳು

ಇಷ್ಟೆಲ್ಲಾ ಸಾಧನೆ ಮಾಡಿರುವ ಘನಿ ಅವರಿಗೆ ಜಿಲ್ಲಾ ಮಟ್ಟದ ಅರಸಮ್ಮ ಮೆಣಸೇಗೌಡ ಕೃಷಿ ಪ್ರಶಸ್ತಿ, ತಾಲೂಕು, ರಾಜ್ಯ ಮಟ್ಟದ ಜೀವ ವೈವಿಧ್ಯ ಸಂರಕ್ಷಕ ಪ್ರಶಸ್ತಿ, ರಾಜ್ಯ ಸರ್ಕಾರದ ಕೃಷಿ ಪಂಡಿತ ಪ್ರಶಸ್ತಿ, ನ್ಯಾಷನಲ್ ಇನೋವೇಷನ್ ರೈಸ್ ಫಾರ್ಮರ್, ಮ್ಯಾಂಗೋ ಡ್ರೈವರ್ ಸಿಟಿ ಫಾರ್ಮರ್ ಮುಂತಾದ ಪುರಸ್ಕಾರಗಳು ದೊರೆತಿವೆ.

ಈಗಾಗಲೇ ಸಂರಕ್ಷಿಸಿರುವ ತಳಿಗಳ ಬಿತ್ತನೆ ಬೀಜಗಳನ್ನು 5000 ಜನರಿಗೆ ನೀಡಿ ತಳಿಗಳ ಅಭಿವೃದ್ಧಿಗೆ ರೈತರನ್ನು ಉತ್ತೇಜಿಸುತ್ತಿದ್ದಾರೆ. ಇವರ ಗದ್ದೆಗೆ ನಿತ್ಯವೂ ಪ್ರಗತಿ ಪರ ರೈತರು, ವಿಜ್ಞಾನಿಗಳು, ಅಧಿಕಾರಿಗಳು, ವಿವಿಧ ರಾಜ್ಯಗಳ ದೇಶಿ ತಳಿ ಸಂರಕ್ಷಣಾ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ವಿದ್ಯಾರ್ಥಿಗಳು ಭೇಟಿ ನೀಡಿ ಮಾಹಿತಿ ಪಡೆಯುತ್ತಿದ್ದಾರೆ.

ನೂರಾರು ತಳಿಗಳನ್ನು ಯಾರ ಸಹಾಯವಿಲ್ಲದೆ ಸ್ವಂತ ಖರ್ಚಿನಲ್ಲಿ ಸಂರಕ್ಷಣೆ ಮಾಡುತ್ತಿರುವುದು ಮೆಚ್ಚುವ ಸಂಗತಿಯಾದರೂ ಘನಿ ಅವರು ವರ್ಷಕ್ಕೆ ಸಾವಿರಾರು ರೂಪಾಯಿಯನ್ನು ಕೈಯಿಂದ ಖರ್ಚು ಮಾಡುವುದಲ್ಲದೆ ನಷ್ಟವನ್ನೂ ಅನುಭವಿಸಿದ್ದಾರೆ. ಇಷ್ಟೊಂದು ತಳಿಗಳನ್ನು ಸಂರಕ್ಷಣೆ ಮಾಡಿರುವ ಘನಿಯವರಿಗೆ ಯಾವುದೇ ಸಹಾಯ ಧನವಿಲ್ಲ. ಕೆಲವು ಸಂಸ್ಥೆಗಳು ಸಹಾಯದ ಭರವಸೆ ನೀಡಿದ್ದರೂ ಅವು ಭರವಸೆಯಾಗಿಯೆ ಉಳಿದಿವೆ. ಸಹಾಯ ಹಸ್ತಕ್ಕಾಗಿ ಸೈಯ್ಯದ್ ಘನಿ ಖಾನ್ ಕಾಯುತ್ತಿದ್ದಾರೆ.

ಮಾಹಿತಿಗಾಗಿ: **ಸಯ್ಯದ್ ಘನಿ ಖಾನ್**
ಕಿರುಗಾವಲು, ಮಳವಳ್ಳಿ ತಾಲೂಕು, ಮಂಡ್ಯ ಜಿಲ್ಲೆ, ಮೊ.ನಂ.9901713351